ಕೊಟ್ಟಿದ್ದಾರೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಇದನ್ನೆಲ್ಲಾ ರಿಫರ್ ಮಾಡಿದ್ದರೆ ಸುಲಭವಾಗಿ ರಿಪೋರ್ಟ್ ಕೊಡಬೇಕಾಗಿತ್ತು.

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕಂಳಿತುಕೊಳ್ಳಬೇಕು.

ವಿಷಯ.—ವರುಣಾನಾಲೆ ಯೋಜನೆ

ಪ್ರ. ಸಂಖ್ಯೆ 25 (27) ಶ್ರೀಮತಿ. ಮುಕ್ತರುನ್ನೀಸಾಬೇಗಂ (ನರಸಿಂಹರಾಜ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯೆ ಇಟ್ಟು ಉತ್ತರಿಸುವರೆ?

ಅ) ಕೃಷ್ಣರಾಜ ಸಾಗರದ ವರುಣಾ ನಾಲಾ ಯೋಜನೆ (ಕೃಷ್ಣರಾಜಸಾಗರ ಜಲಾಶಯದ ಬಲ ದಂಡೆ ನಾಲೆ) ಗೆ ಅಸ್ತಿಭಾರ ಎಂದು ಹಾಕಲಾಯಿತು ;

ಆ) ಯೋಜನೆಯ ಒಟ್ಟು ಅಂದಾಜು ಮೊಬಲಗು ಮತ್ತು ನಾಲೆಯ ಒಟ್ಟು ಉದ್ದ ;

ಇ) ಈ ಯೋಜನೆಯಿಂದ ಅನುಕೂಲ ಪಡೆಯಬಹುದಾದ ತಾಲ್ಲೂಕುಗಳು ಮತ್ತು ನೀರಾವರಿ ಗೊಳಗಾಗುವ ಭೂಮಿಗಳ ಎಕರೇವಾರು ವಿವರಗಳು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) 15-4-1979ರಂದು ಅಸ್ತಿಭಾರ ಹಾಕಲಾಯಿತು.

ಆ) 1976-77ನೇ ಪಟ್ಟಿಯ ಆಧಾರದಿಂದ ಮಂಜೂರಾತಿ ಆದ ಅಂದಾಜು ಮೊಬಲಗು 1850 ಲಕ್ಷ ರೂ.ಗಳು ನಾಲೆಯ ಒಟ್ಟು ಉದ್ದ 135 ಕಿ.ಮೀ.

ಇ) (1) ಶ್ರೀರಂಗಪಟ್ಟಣ ತಾಲ್ಲೂಕ್ ಮಂಡ್ಯ ಜಿಲ್ಲೆ — ನೀರಾವರಿ ಸೌಲಭ್ಯ ಪಡೆಯುವ ಪ್ರದೇಶ 3055 ಹೆಕ್ಟೇರ್ (7550 ಎಕರೆ)

(2) ಮೈಸೂರು ಜಿಲ್ಲೆ

1)	ಮೈಸೂರು ತಾಲ್ಲೂಕ್	18236 ಹೆಕ್ಟೇರ್ (45,060 ಎಕರೆ)
2)	ಹೆಚ್.ಡಿ. ಕೋಟೆ ತಾಲ್ಲೂಕ್	1809 ಹೆಕ್ಟೇರ್ (4470 ಎಕರೆ)
3)	ನಂಜನಗೂಡು ತಾಲ್ಲೂಕ್	6190 ಹೆಕ್ಟೇರ್ (15295 ಎಕರೆ)
4)	ಟಿ. ನರಸೀಪುರ ತಾಲ್ಲೂಕ್	3085 ಹೆಕ್ಟೇರ್ (7625 ಎಕರೆ)
	ಒಟ್ಟು	32,375 ಹೆಕ್ಟೇರ್ (80,000 ಎಕರೆ)

Smt. Muktharunnissa.—Mr. Speaker, Sir, I put question No. 127. Before this I request you to permit me to speak in English.

ಶ್ರೀ ಜಿ. ನಾರಾಯಣ್‌ಕುಮಾರ್.—ಅವರಿಗೆ ಕನ್ನಡ ಚೆನ್ನಾಗಿ ಬರುತ್ತೇದೆ ಕನ್ನಡದಲ್ಲಿ ಅವರು ಮಾತನಾಡಲಿ.

ಶ್ರೀಮತಿ ಮುಕ್ತಾರುನ್ನೀಸಾ ಬೇಗಂ.—ನಮಗೆ ಕನ್ನಡ ಬರುತ್ತದೆ, ಆದರೆ ಭಾಷಣ ಮಾಡುವುದಕ್ಕೆ ಬರುವುದಿಲ್ಲ. ನಾನು ಹೊಸಬಳು, ಆದರಲ್ಲೂ ನಾನು ಹೆಂಗಸು.

ಅಧ್ಯಕ್ಷರು.—ಅವರಿಗೆ ರಾಜ್ಯಾಂಗದತ್ತವಾದ ಹಕ್ಕು ಇದೆ. ಇಂಗ್ಲೀಷ್‌ನಲ್ಲಿ ಅವರು ಮಾತನಾಡಬಹುದು.

ಶ್ರೀ ಜಿ. ನಾರಾಯಣಕುಮಾರ್.—ಕನ್ನಡ ಮಾತನಾಡುವುದಕ್ಕೆ ಬರುವದಿಲ್ಲ ಎಂದು ಹೇಳುತ್ತಾರೆ. ಈ ರಾಜ್ಯ ಕನ್ನಡ, ಈ ಸದನ ಕನ್ನಡ, ಇಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಇರಬೇಕು.

ಅಧ್ಯಕ್ಷರು.—ಅವರ ಮಾತೃಭಾಷೆ ಕನ್ನಡ ಅಲ್ಲ, ಆದರಿಂದ ಯಾವ ಭಾಷೆಯಲ್ಲಾದರೂ ಮಾತನಾಡಲಿ, ಒತ್ತಡ ತರುವುದು ಬೇಡ, ಅದು ಸರಿಯಲ್ಲ, ನೀವು ಹೀಗೆ ಮಾಡಿದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಾವು ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ಇದು ಕಾಂಗ್ರೆಸ್ ಸರ್ಕಾರವಲ್ಲ, ಜನತೆಯ ಸರ್ಕಾರ.

ಶ್ರೀ ಜಿ. ನಾರಾಯಣಕುಮಾರ್.—ಜನತೆಯ ಭಾಷೆಯಾದ ಕನ್ನಡದಲ್ಲಿ ಮಾತನಾಡಲು ತಾವು ಆದೇಶ ನೀಡಿ.

ಅಧ್ಯಕ್ಷರು.—ನಾರಾಯಣಕುಮಾರ್‌ರವರೇ ತಾವು ಸ್ವಲ್ಪ ರಾಜ್ಯಾಂಗವನ್ನು ಓದಿ ಆಮೇಲೆ ನಾವು ನೀವು ಸ್ವಲ್ಪ ಚರ್ಚೆ ಮಾಡೋಣ. ತಮ್ಮ ವರ್ತನೆ ಸರಿಯಲ್ಲ.

Smt. Muktharunnissa.—May I know from the Government for how many months ie.' from 1979 to 1985 the work was stopped ?

Sri K. H. Patil.—Mr. Speaker, Sir every now and then hon Member Sri Narayanakumar gets up and ask the members to speak in Kannada only. Even though I could speak in Kannada well as a protest I want to speak in English. I want the Hon'ble Speaker to guide the House in this matter.

ಶ್ರೀ ಜಿ. ನಾರಾಯಣಕುಮಾರ್.—ತಪ್ಪು ಮಾತಾಡಿದ್ದರೆ ಶಿಕ್ಷೆ ಕೊಡಿ. ಶ್ರೀಮಾನ್ ಕೆ.ಎಚ್. ಪಾಟೀಲ್‌ರವರಿಗೆ ಕನ್ನಡ ಮಾತನಾಡುವುದಕ್ಕೆ ಬರುತ್ತದೆ. ಉದ್ದೇಶಪೂರ್ವಕವಾಗಿ ಅವರು ಕನ್ನಡದಲ್ಲಿ ಮಾತನಾಡುತ್ತಿಲ್ಲ.

ಶ್ರೀ ಕೆ.ಎಚ್. ಪಾಟೀಲ್.—ಕನ್ನಡ ಮಾತನಾಡುತ್ತೇನೆ. ಆದರೆ ಈ ರೀತಿ ಹಠ ಮಾಡಿದರೆ ಎಲ್ಲರ ಜೊತೆಯಲ್ಲೂ ಇಂಗ್ಲೀಷ್‌ನಲ್ಲೇ ಮಾತನಾಡುತ್ತೇನೆ.

ಶ್ರೀ ಬಿ.ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಕನ್ನಡವನ್ನೇ ಮಾತನಾಡುವುದಕ್ಕೆ ಅವಕಾಶ ಕೊಡಿ. ಕೆ.ಎಚ್. ಪಾಟೀಲರು ಇಂಗ್ಲೀಷ್ ಮಾತನಾಡಿ ವೀರನಾರಾಯಣನಿಗೆ ಅಪಚಾರ ಮಾಡಿದ್ದಾರೆ.

ಶ್ರೀ ನಾರಾಯಣಕುಮಾರ್.—ಕನ್ನಡ ಪ್ರದೇಶದಲ್ಲೇ ಇದ್ದು. ಕನ್ನಡ ಮಾತನಾಡಲು ಬಾರದೇ ಇಂಗ್ಲೀಷ್‌ನಲ್ಲಿ ಮಾತನಾಡುವುದು ಏನು ಗ್ರಹಚಾರ ಸ್ವಾಮಿ, ನಿಜವಾಗಿಯೂ ನನಗೆ ಬಹಳ ನೋವಾಗುತ್ತದೆ. ದಯವಿಟ್ಟು ಕನ್ನಡ ಬರುವವರಿಗೆ ಕನ್ನಡದಲ್ಲಿ ಮಾತನಾಡುವಂತೆ ಆದೇಶ ಕೊಡಿ.

ಶ್ರೀಮತಿ ಮುಕ್ತಾರುನ್ನೀಸಾ ಬೇಗಂ.—ಮಾನ್ಯ ಅಧ್ಯಕ್ಷರೇ, ನನಗೆ ಕನ್ನಡ ಸರಿಯಾಗಿ ಬರುವುದಿಲ್ಲ.

ಶ್ರೀ ವೇಂದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಮುಕ್ತಾರುನ್ನೀಸಾ ಬಹಳ ಮುದ್ದಾಗಿ ಕನ್ನಡ ಮಾತನಾಡುವುದನ್ನು ಮೈಸೂರಿನಲ್ಲಿ ನಾನು ನೋಡಿದ್ದೇನೆ. ಬಹಳ ಮುದ್ದಾಗಿ ಕನ್ನಡ ಮಾತನಾಡುತ್ತಾರೆ. ಬೇಕಾದಷ್ಟು ಚೆನ್ನಾಗಿ ಕನ್ನಡ ಮಾತನಾಡುತ್ತಾರೆ. ದಯವಿಟ್ಟು ಕನ್ನಡದಲ್ಲಿ ಅವರಿಗೆ ಮಾತನಾಡುವುದಕ್ಕೆ ಹೇಳಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ಯಾವಾಗಲೂ ನಮಗೆ ಹೇಳುತ್ತೀರಿ. ಅವರಿಗೆ ಸ್ವಲ್ಪ ಹೇಳಿ.

ಶ್ರೀಮತಿ ಮುಕ್ತಾರುನ್ನೀಸಾ ಬೇಗಂ.—ನನಗೆ ಭಾಷಣ ಮಾಡುವಷ್ಟು ಕನ್ನಡ ಬರುವುದಿಲ್ಲ. Sir, Just now Hon'ble Minister has mentioned that through the Varuna Nala Project about 80,000 acres will be irrigated in Mysore District which is consisting of 5 taluks. I would like to know why not that Government execute this project early so that it could meet the growing demand of the foodgrains of the State's population?

Sri H.D. Devegowda.—The only prcblem is resources.

Smt. Mukhtar Unnisa,—Is it not a fact that the unemployement problem in agriculture would have been solved to some extent if it was done early.

(ಜಿ. ನಾರಾಯಣಕುಮಾರ್ ಅವರು ಎದ್ದುನಿಂತು ಸದಸ್ಯರು ಕನ್ನಡದಲ್ಲೇ ಮಾತನಾಡಬೇಕೆಂದು ಒತ್ತಾಯಿಸಿದರು.

(ಗೊಂದಲ)

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ದೊಡ್ಡ ವಾದ ವಿವಾದಕ್ಕೆ ಇಳಿಯುವುದು ಬೇಕಾಗಿಲ್ಲ. ಮಾನ್ಯ ಸದಸ್ಯೆಯವರು ನಾನು ಕನ್ನಡದಲ್ಲಿ ಮಾತನಾಡಬಲ್ಲೆ, ಆದರೆ ಉತ್ತಮವಾದ ಭಾಷಣ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಈ ಸದನದಲ್ಲಿ ಇರತಕ್ಕವರೆಲ್ಲರೂ ಪ್ರತಿಭಾವಂತರು, ಅಥವಾ ಭಾಷೆಯಲ್ಲಿ ಅತ್ಯಂತ ಉತ್ತಮವಾದ ಪ್ರಭುತ್ವವನ್ನು ಬೆಳೆಸಿಕೊಂಡಿದ್ದಾರೆ ಎಂದು ಹೇಳುವುದಿಲ್ಲ. ಅವರಿಗೆ ತಿಳಿದ ರೀತಿಯಲ್ಲಿ ಮಾತನಾಡಬಹುದು. ಈ ವಿಷಯದ ಬಗ್ಗೆ ಇಷ್ಟೊಂದು ಗೊಂದಲ ಆಗುವ ಅವಶ್ಯಕತೆ ಇಲ್ಲ. ಪ್ರಶ್ನೆಗೆ ಸಂಬಂಧಿಸಿದಹಾಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರ ಬಂದಮೇಲೆ ಹೆಚ್ಚು ಹಣವನ್ನು ಈ ಯೋಜನೆಗೆ ಕೊಟ್ಟಿದ್ದೇವೆ.

ಎಂದರೆ ಹಿಂದಿನ ಸರ್ಕಾರ ಈ ಯೋಜನೆಗೆ ಹಣ ಕೊಡಲಿಲ್ಲ ಎಂದು ಆರೋಪಣೆ ಮಾಡುತ್ತಿಲ್ಲ. ಒಟ್ಟು 8 ಕೋಟಿ 40 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದೇವೆ. ಆದರೆ ಪುನರ್ವಿಮರ್ಶಿತ ಅಂದಾಜಿನ ಪ್ರಕಾರ ಇದಕ್ಕೆ ಸುಮಾರು 31 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮಂಜೂರಾಗಿದ್ದುದು ಕೇವಲ 18 ಕೋಟಿ ರೂಪಾಯಿಗಳಿಗೆ. ಇದರಲ್ಲಿ 8 ಕೋಟಿ 40 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇದೊಂದೇ ಪ್ರಾಜೆಕ್ಟ್ ಅಲ್ಲ ನಮ್ಮಲ್ಲಿ ತೆಗೆದುಕೊಂಡಿರತಕ್ಕ ಹಲವಾರು ದೊಡ್ಡ ಮತ್ತು ಮಧ್ಯಮ ನೀರಾವರಿ ಯೋಜನೆಗೆ ಹೆಚ್ಚು ಹಣ ಕೊಟ್ಟು ಕೆಲಸ ಮಾಡಬೇಕೆಂದು ಹೇಳಿದರೂ ಸಂಪನ್ಮೂಲದ ಚೌಕಟ್ಟನ್ನು ಮೀರಿ ಹೋಗುವುದು ಕಷ್ಟವಿದೆ. ಮಾನ್ಯ ಸದಸ್ಯರು ಹೇಳುವುದನ್ನು ಗಮನದಲ್ಲಿಟ್ಟುಕೊಂಡು ಸಂಪನ್ಮೂಲವನ್ನು ರೂಢಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಿಹಣ ಕೊಡುವುದಕ್ಕೆ ಪ್ರಯತ್ನಮಾಡೋಣ.

Smt. Mukhter Unnisa.—You have mentioned that the estimate has gone upto Rs. 1,850 lakhs. Is it not a fact that due to delay, the cost of cement, labour etc., are increased ?

ಶ್ರೀ ಎಚ್. ಡಿ. ದೇವೇಗೌಡ.—ಅವರು ಹೇಳತಕ್ಕದ್ದು ನಿಜ. ಎಷ್ಟು ಜಾಗ್ರತೆ ನಾವು ಕೆಲಸ ಮಾಡುತ್ತೇವೋ ಅಷ್ಟೂ ಕಡಿಮೆ ಖರ್ಚಿನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಎಕ್ಸ್‌ಕಲೇಷನ್ ಮತ್ತು ಇನ್‌ಫ್ಲೇಷನ್‌ನಿಂದ ಅಂದಾಜು ಕೂಡ ಹೆಚ್ಚಾಗುತ್ತಾ ಹೋಗುತ್ತದೆ, ಹಣದ ಕೊರತೆಯಿಂದ ಕೆಲಸ ನಿಧಾನವಾಗಿದೆ.

ವಿಷಯ : ಕಾಪುವಿನಲ್ಲಿ ನಿರ್ಮಾಣ ಹಂತದಲ್ಲಿರುವ ಹರಿಜನ ವಿದ್ಯಾರ್ಥಿನಿ ನಿಲಯದ ಕಟ್ಟಡ ಪೂರ್ಣಗೊಳಿಸುವ ವಿಚಾರ.

ಪ್ರ. ಸಂಖ್ಯೆ 26 (142) ಶ್ರೀ ವಸಂತ ವಿ. ಸಾಲಿಯಾನ್ (ಕಾಪು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕಾಪುವಿನಲ್ಲಿ ನಿರ್ಮಾಣ ಹಂತದಲ್ಲಿರುವ ಹರಿಜನ ವಿದ್ಯಾರ್ಥಿನಿ ನಿಲಯದ ಕಟ್ಟಡ ಯಾವಾಗ ಸಂಪೂರ್ಣಗೊಳ್ಳುವುದು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಕಾಪುವಿನಲ್ಲಿ ನಿರ್ಮಾಣವಾಗುತ್ತಿರುವ ಹರಿಜನ ವಿದ್ಯಾರ್ಥಿನಿ ನಿಲಯದ ಕಟ್ಟಡವು ಕೊನೆಯ ಹಂತದಲ್ಲಿದೆ. ಮತ್ತು ಈ ಕಟ್ಟಡವನ್ನು ಆಗಸ್ಟ್ 85ರ ಅಂತ್ಯದೊಳಗೆ ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವುದೆಂದು ನಿರೀಕ್ಷಿಸಲಾಗಿದೆ.

ಶ್ರೀ ವಸಂತ ಸಾಲಿಯಾನ (ಕಾಪು).—ಸನ್ಮಾನ್ಯ ಅಧ್ಯಕ್ಷರೆ, ಈ ಕಾಮಗಾರಿ 1981-82ನೇ ಇಸವಿಯಲ್ಲಿ ಪ್ರಾರಂಭವಾಗಿದ್ದುದು. ಈತನಕ ಅದು ಪೂರ್ಣವಾಗಲಿಲ್ಲ. ಸಣ್ಣ ಕಟ್ಟಡವಾಗಿರುವುದರಿಂದ ಅಲ್ಲಿ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದೆ. ಆದಷ್ಟು ಜಾಗ್ರತೆ ವಿದ್ಯಾರ್ಥಿನಿ ನಿಲಯದ ಕೆಲಸವನ್ನು ಪೂರ್ಣಮಾಡಿ ಹರಿಜನ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಆಗಸ್ಟ್ ತಿಂಗಳಲ್ಲಿ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಸಂತ ಸಾಲಿಯಾನ.—ಹೋದ ಸಾರಿ ಕೂಡ ಕೇಳಿದ್ದೆ. ಇನ್ನೂ ಅದನ್ನು ಮುಗಿಸಿಲ್ಲ.

ಶ್ರೀ ವಿ. ಎಲ್. ಪಾಟೀಲ್.—ಕಟ್ಟಡ ಪೂರ್ಣವಾಗಿದೆ. ಕೆಲವು ಸಣ್ಣಪುಟ್ಟ ಕೆಲಸಗಳಿವೆ. ಆಗಸ್ಟ್ ತಿಂಗಳಿನಲ್ಲಿ ಎಲ್ಲ ಮುಗಿಸುತ್ತೇವೆ.

ಶ್ರೀ ವಸಂತ ಸಾಲಿಯಾನ.—1984ನೇ ಡಿಸೆಂಬರ್‌ನಲ್ಲೇ ಈ ಕೆಲಸ ಮುಗಿಯಬೇಕಾಗಿತ್ತು. ಆದರೆ ಕಾರಣಾಂತರದಿಂದ ಅದು ಮುಗಿಯಲಿಲ್ಲ. ಇದಕ್ಕೆ ಕಾರಣ ರಾಜಕೀಯ ಇರಬಹುದು, ಕಾಂಗ್ರೆಸ್ (ಐ) ಶಾಸಕರ ಕ್ಷೇತ್ರದಲ್ಲಿ ಕೆಲಸಗಳನ್ನು ಮಾಡುತ್ತಿಲ್ಲ. ಆದ್ದರಿಂದ ಇಲ್ಲೂ ಅದೇ ರೀತಿ ಮಾಡುತ್ತಿರಬಹುದು ಎಂಬ ಕಲ್ಪನೆ ನಮಗೆ ಬರುತ್ತಿದೆ.

ಶ್ರೀ ವಿ. ಎಲ್. ಪಾಟೀಲ್.—ಅಧ್ಯಕ್ಷರೇ, ಇದರಲ್ಲಿ ರಾಜಕೀಯ ಇಲ್ಲ. ಮೊದಲು 9 ಲಕ್ಷ 95 ಸಾವಿರ ರೂಪಾಯಿಗಳ ಅಂದಾಜಿನಲ್ಲಿ ಕೆಲಸ ಪ್ರಾರಂಭವಾಯಿತು. ಈಗ ಈ ಅಂದಾಜು 11 ಲಕ್ಷ 46 ಸಾವಿರದ 363 ರೂಪಾಯಿಗಳಿಗೆ ಏರಿದೆ. ಕೆಲಸ ಮಾಡುವುದಕ್ಕೆ ಸ್ವಲ್ಪ ತಡವಾಗಿದೆ. ಆದರೆ ಇದರಲ್ಲಿ ರಾಜಕೀಯ ಏನೂ ಇಲ್ಲ. ಆಗಸ್ಟ್‌ನಲ್ಲಿ ಅದನ್ನು ಪೂರ್ತಿ ಮಾಡುತ್ತೇನೆ.